## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ.ಸಂಖ್ಯೆ:1571/2023**

ಪಿರ್ಯಾದಿ : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,

ವಿರುದ್ಧ

ಆರೋಪಿತರು :**1.** ನಾಗೇಶ.ಹೆಚ್.ಬಿ,
ವಯಸ್ಸು ಸುಮಾರು 45 ವರ್ಷ,
ಬಿನ್ ದಿಃ ಬೊಮ್ಮಯ್ಯ,
ವಾಸಃ ಬಿ.ಹೊಸಳ್ಳಿ ಗ್ರಾಮ,
ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು.

**2.** ಕೃಷ್ಣೇಗೌಡ.ಹೆಚ್.ಎಂ,
ವಯಸ್ಸು ಸುಮಾರು 59 ವರ್ಷ,
ಬಿನ್ ಬಿ.ಹೊಸಳ್ಳಿ ಗ್ರಾಮ,
ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು.

ಹಾಲಿ ವಾಸಃ ಸಿಪಾನಿ ಲೇಔಟ್,
ಗವನಹಳ್ಳಿ, ಚಿಕ್ಕಮಗಳೂರು ಪಟ್ಟಣ.

### ಆಪಾದನೆಯ ಸಾರಾಂಶ.

ಶ್ರೀ. ವಿಶ್ವನಾಥ್ ಎ., C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಹೊಸಹಳ್ಳಿ ಗ್ರಾಮದಲ್ಲಿ ಚಾಸಾ14-ರತೀಶ್, ಚಾಸಾ15-ಸರ್ವನ್, ಚಾಸಾ23-ಸುರೇಶ್ ಮತ್ತು ಚಾಸಾ28-ಆಶ್ರೀತ್ ರವರು ಗ್ರಾಮಸ್ಥರ ಸಹಾಯದಿಂದ ಗ್ರಾಮದಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡಿದ್ದು, ದಿನಾಂಕ 0609.2022 ರಂದು ಗಣಪತಿ ವಿಸರ್ಜನೆ ಮಾಡಲು 2 ನೇ ಆರೋಪಿಯಾದ ನಿಮ್ಮ ಬಾಬ್ತು ವಾಹನ ನೋಂದಣಿ ಸಂಖ್ಯೆ: ಕೆಎ-18-ಟಿಎ-3151/3152 ನೇ ಮಹೀಂದ್ರಾ ಕಂಪನಿಯ ಟ್ರ್ಯಾಕ್ಟರ್ ಮತ್ತು ಟ್ರೈಲರ್ ನಲ್ಲಿ ಗಣಪತಿ ಕೂರಿಸಲು ಟ್ರೈಲರ್ ಗೆ ಮರದ ಪ್ಲೈವುಡ್ ನಲ್ಲಿ ಕಮಾನಿನಾಕಾರದಲ್ಲಿ ಪ್ರಭಾವಳಿ ಮಾಡಿ, ಸದರಿ ಪ್ರಭಾವಳಿಯನ್ನು ಕಬ್ಬಿಣದ ಎರೆಡು ಸರಳುಗಳ ಸಹಾಯದಿಂದ ಕಟ್ಟಿಕೊಂಡು ಹಾಗೂ ಟ್ರಾಲಿಯ ಸುತ್ತಲೂ ಮರದ ಮತ್ತು ಬಿದಿರಿನ ದೊಣ್ಣೆಗಳನ್ನು ಕಟ್ಟಿ ಡೆಕೋರೇಷನ್ ಮಾಡಿ, ಗಣಪತಿಯನ್ನು ಕೂರಿಸಿಕೊಂಡು 1 ನೇ

ಆರೋಪಿಯಾದ ನಿಮ್ಮ ಚಾಲನೆಯಲ್ಲಿ ಸಂಜೆ 4.00 ಗಂಟೆಯಿಂದ ರಾತ್ರಿ ಸುಮಾರು 9.00 ಗಂಟೆಯವರೆಗೆ ಗ್ರಾಮದಲ್ಲಿ ಮೆರವಣಿಗೆ ಮಾಡಿ, ನಂತರ ಗ್ರಾಮದ ಸಮೀಪವಿರುವ ಹೇಮಾವತಿ ನದಿಯ ಬಳಿ ಹೋಗಿ ರಾತ್ರಿ ಸುಮಾರು 10.30 ಕ್ಕೆ ಗಣಪತಿ ವಿಸರ್ಜನೆ ಮಾಡಿ ಮರಳಿ ಊರಿಗೆ ಬರುವಾಗ ಸದರಿ ಟ್ರ್ಯಾಕ್ಟರ್ ಹಿಂಭಾಗದ ಟ್ರೈಲರ್ ನಲ್ಲಿ ಚಾಸಾ1-ಪ್ರಸನ್ನ ರವರ ಹೆಂಡತಿ ಶ್ರೀಮತಿ ಪಾರ್ವತಿ, ಚಾಸಾ5-ಉಮೇಶ್ ರವರ ತಾಯಿಯ ತಮ್ಮನಾದ ರಾಜು, ಚಾಸಾ12-ಕುಮಾರಯ್ಯನ ಮಗಳಾದ ಕುಃರಚನಾ, ಚಾಸಾ25-ಕುಃಪಲ್ಲವಿ, ಚಾಸಾ26-ಗೌರಮ್ಮ ಮತ್ತು ಚಾಸಾ27-ಸಂಗೀತ ರವರು ಕುಳಿತುಕೊಂಡಿದ್ದು, 1 ನೇ ಆರೋಪಿಯಾದ ನೀವು ಹೇಮಾವತಿ ನದಿ ಕಡೆಯಿಂದ ಬಿ.ಹೊಸಹಳ್ಳಿ ಕಡೆಗೆ ಸದರಿ ಟ್ರ್ಯಾಕ್ಟರ್ ಅನ್ನು ವೇಗವಾಗಿ ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **279** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಸದರಿ ವಾಹನವನ್ನು ವೇಗವಾಗಿ ತುಂಬಾ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುವಾಗ ವಿಪರೀತ ಗಾಳಿ-ಮಳೆ ಬರುತ್ತಿದ್ದ ಮಾರ್ಗ ಮಧ್ಯದಲ್ಲಿ ರಸ್ತೆಯ ಮೇಲೆ ಅಡ್ಡಲಾಗಿ ಎಳೆಯಲಾಗಿದ್ದ ಮೆಸ್ಕಾಂ ಇಲಾಖೆಯ 11 ಕೆವಿ ವಿಧ್ಯುತ್ ವೈಯರ್ ಮೇಲೆ ಗಾಳಿ-ಮಳೆಯಿಂದ ಮರದ ಕೊಬೆ ಬಿದ್ದು ಜಗ್ಗಿರುವುದನ್ನು 1 ನೇ ಆರೋಪಿಯಾದ ನೀವು ಗಮನಿಸದೇ ಇದ್ದುದರಿಂದ ಟ್ರ್ಯಾಕ್ಟರ್ ಹಿಂಭಾಗದ ಪ್ಲೈವುಡ್ ನ ಪ್ರಭಾವಳಿಗೆ ವಿಧ್ಯುತ್ ವೈಯರ್ ತಾಗಿದ್ದು, ಪ್ಲೈವುಡ್ ಮಳೆಯಿಂದ ನೆನೆದಿದ್ದರಿಂದ ವಿಧ್ಯುತ್ ಪ್ರವಹಿಸಿ ಟ್ರಾಕ್ಟರ್-ಟ್ರೈಲರ್ ನಲ್ಲಿ ಕುಳಿತಿದ್ದ ಶ್ರೀಮತಿ ಪಾರ್ವತಿ, ಕುಃರಚನಾ ಮತ್ತು ರಾಜು ಇವರುಗಳು ವಿಧ್ಯುತ್ ಶಾಕ್ ನಿಂದ ಮೃತಪಟ್ಟಿರುತ್ತಾರೆ. ಈ ರೀತ್ಯಾ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **304(ಎ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ವಾಹನ ಚಾಲನಾ ಪರವಾನಗಿ ಇಲ್ಲದೇ ಇದ್ದರೂ ಸಹ ಸದರಿ ಟ್ರಾಕ್ಟರ್ ಅನ್ನು ಚಾಲನೆ ಮಾಡಿಕೊಂಡು ಬಂದಿರುತ್ತೀರಿ. ಈ ರೀತ್ಯಾ 1 ನೇ ಆರೋಪಿಯಾದ ನೀವು ವಾಹನ ಕಾಯಿದೆ ಕಲಂ **181** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ನಿಮ್ಮ ಟ್ರ್ಯಾಕ್ಟರ್ ಅನ್ನು ವಿಮೆ ಮಾಡಿಸದೇ 1 ನೇ ಆರೋಪಿಗೆ ನೀಡಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ

ನೀವು ವಾಹನ ಕಾಯ್ದೆ ಕಲಂ **196** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಗೆ ಚಾಲನಾ ಪರವಾಗಿನ ಇಲ್ಲದೇ ಇದ್ದರೂ ಸಹ ನಿಮ್ಮ ಟ್ರ್ಯಾಕ್ಟರ್ ಅನ್ನು 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತೀರಿ. ಈ ರೀತ್ಯಾ 2 ನೇ ಆರೋಪಿಯಾದ ನೀವು ವಾಹನ ಕಾಯ್ದೆ ಕಲಂ **181(3)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

(ಆರೋಪಿತರಿಗೆ ದಿನಾಂಕ 30.08.2024 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

sd/-

ಮೂಡಿಗೆರೆ
ದಿನಾಂಕಃ 30.08.2024.

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.